


**ಪಾರ್ವತಿ:** ರಮ್ಯಾ, ಪ್ರೀತಿಯಲ್ಲಿ ಬಿದ್ದಿರುವ ಹುಡುಗರು ವಿಚಿತ್ರವಾಗಿ ವರ್ತಿಸುತ್ತಾರಲ್ಲ ಏಕೆ?
**ರಮ್ಯಾ:** ಅಯ್ಯೋ ಪಾರ್ವತಿ, ಅವರು ಪ್ರೀತಿಯಲ್ಲಿ ಬೀಳದಿರುವಾಗಲೂ ಹುಚ್ಚು ಹುಚ್ಚರಂತೆ ವರ್ತಿಸುತ್ತಾರೆ ನಿನಗೆ ಗೊತ್ತಾ.

**ನಾಣಿ:** ಚಂದ್ರು, ನನ್ನ ಕನಸಿನಲ್ಲಿ ಬರೋ ಹುಡುಗಿಯರಿಗೆ ಏನನ್ನಲಿ?
**ಚಂದ್ರು:** ಕನಸಿನಲ್ಲಿ ಬಂದರೆ ಏನು ಪ್ರಯೋಜನವಿಲ್ಲ ಅಂತ ಹೇಳು.

**ಆತ:** ಹೆಂಡತಿ ಅಂದ್ರೆ ಒಂದು ಕಣ್ಣು ಇದ್ದ ಹಾಗೆ ಎನ್ನುವುದು ನಿನಗೆ ಗೊತ್ತಾ?
**ಈತ:** ಗೊತ್ತಿರುವುದಕ್ಕೆ ನಾನು ಇನ್ನೊಬ್ಬಳನ್ನು ಮದುವೆಯಾದದ್ದು.

**ಮನೆಯಾಕೆ:** ಇದೇನು, ಇವತ್ತು ಇನ್ನೊಬ್ಬ ಭಿಕ್ಷುಕನನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದೀಯಾ?
**ಭಿಕ್ಷುಕ:** ಹೌದು ತಾಯಿ, ನಾಳೆಯಿಂದ ನಾನು ರಜಾ ತೆಗೆದುಕೊಂಡಿದ್ದೇನೆ ಅದಕ್ಕೆ ಇವನಿಗೆ ಮನೆಗಳನ್ನು ತೋರಿಸುತ್ತಿದ್ದೇನೆ.

**ಪತ್ನಿ:** ರೀ, ನಿಮ್ಮ ಸ್ವಭಾವ ನೋಡಿದ್ರೆ ನಿಮ್ಮನ್ನು ಯಾರು ಬೇಕಾದರೂ ಯಾಮಾರಿಸಬಹುದು.
**ಪತಿ:** ಹೌದು, ನೀನು ಹೇಳುವುದು ನಿಜ, ಮೊದಲು ನಿಮ್ಮಪ್ಪನೇ ಈ ಲಾಭ ಪಡೆದದ್ದು.

**ವಕೀಲ:** ನಿನ್ನ ಕಾಯಿಲೆಗೆ ಡಾಕ್ಟರ್ ಹತ್ತಿರ ಹೋಗುವ ಬದಲು ನನ್ನ ಹತ್ತಿರ ಬಂದಿರುವೆಯಲ್ಲ?
**ಆತ:** ಡಾಕ್ಟರ್ ಹತ್ರ ಹೋಗಿದ್ದೆ ಸರ್, ಅವರಿಂದ ವಾಸಿಯಾಗುವುದಿಲ್ಲ ಅಂತ ಗೊತ್ತಾಯ್ತು. ಅದಕ್ಕೆ ಪರಿಹಾರ ಡೈವೋರ್ಸ್ ಒಂದೇ ದಾರಿ ಅಂತೇಳಿ ನಿಮ್ಮ ಬಳಿ ಬಂದೆ.

**ರಾಮು:** ಏನೋ ಕೃಷ್ಣ, ನೀನು ಮನೆಗೆಲಸ ಮಾಡ್ತಾ ಇದ್ದೀಯಲ್ಲ?
**ಕೃಷ್ಣ:** ಹೌದು, ಹಿರಿಯರು ಹೇಳಿಲ್ಲವೇ ಮೊದಲು ಮನೆ ಕೆಲಸಕ್ಕೆ ಆದ್ಯತೆ ಕೊಡಬೇಕು ಅಂತ.

**ಪತ್ನಿ:** ನೋಡ್ರಿ, ಒಂದು ಗಂಟೆಯಿಂದ ಆ ಜೋಡಿ ಹಕ್ಕಿಗಳನ್ನು ನೋಡ್ತಾ ಇದ್ದೇನೆ, ಅವು ಎಷ್ಟೊಂದು ಪ್ರೀತಿಯಿಂದ ಇದ್ದಾವೆ, ನೀವೂ ಇದ್ದೀರಿ?
**ಪತಿ:** ನಾನು ಅವುಗಳನ್ನು ಒಂದು ತಿಂಗಳಿಂದ ನೋಡ್ತಾ ಇದ್ದೀನಿ, ಆ ಗಂಡು ಪಕ್ಷಿ ಪ್ರತಿದಿನ ಬೇರೆ ಹೆಣ್ಣು ಹಕ್ಕಿ ಜೊತೆಯಲ್ಲಿರುತ್ತೆ ನಿನಗೆ ಗೊತ್ತಾ?

**ಕಲಾವಿದ:** ಸರ್, ನಿಧನ ಹೊಂದಿರುವ ನಿಮ್ಮ ಹೆಂಡತಿಯ ಚಿತ್ರವನ್ನು ಜೀವಂತವಾಗಿರುವಂತೆ ಬರೆದು ಕೊಡುತ್ತೇನೆ.
**ಆತ:** ನಿಜವಾಗಿಯೂ ಜೀವಂತವಾಗಿರುವಂತೆ ಬರೆಯುವೆಯಾ?
**ಕಲಾವಿದ:** ಹೌದು.
**ಆತ:** ಖಂಡಿತ ಬೇಡ, ಈಗ ತಾನೆ ನನಗೆ ಮುಕ್ತಿ ಸಿಕ್ಕಿದೆ.

**ಸ್ಮಿತಾ:** ಏನ್ರೀ ನಳಿನಿ, ಈ ಹೊತ್ತಿನಲ್ಲಿ ಟ್ರಿಂ ಆಗಿ ಡ್ರೆಸ್ ಮಾಡಿಕೊಂಡಿದ್ದೀರಲ್ಲ?
**ನಳಿನಿ:** ಟೀವಿ ನೋಡುತ್ತಾ ಕುಳಿತಿದ್ದೆ, ಒಲೆ ಮೇಲೆ ಇಟ್ಟಿದ್ದ ಹುಳಿಯೆಲ್ಲ ಸೀದು ಹೋಗಿದೆ, ನಮ್ಮವರು ಬರುವ ಹೊತ್ತಾಯಿತು ಅದಕ್ಕೆ.

**ಅರವಿಂದ:** ಸರ್, ರಾಜಕಾರಣಿ ಗಂಗಪ್ಪ ಸತ್ತಿರುವುದು ನಿಜವೇ?
**ಸಂಪಾದಕ:** ಯಾಕ್ರೀ ಅನುಮಾನ?
**ಅರವಿಂದ:** ಹೋದ ವಾರ ನನ್ನ ಕನಸಿನಲ್ಲಿ ಅವರು ಸತ್ತಿದ್ದರು. ಆದರೆ ಅದು ನಿಜವಾಗಿರಲಿಲ್ಲ ಅದಕ್ಕೆ.

**ಸೋಮು:** ಹೇಮಂತ, ನೀನು ಮಾವನ ಮನೆಯಲ್ಲಿದ್ದರೂ, ಯಾವಾಗಲೂ ಅತ್ತೆ ಮನೆಯಲ್ಲಿ ಇದ್ದೇನೆ ಅಂತೀಯಲ್ಲ?
**ಹೇಮಂತ:** ಹೌದು, ಮಾವನ ಮನೆಯಲ್ಲಿ ಇದ್ದೇನೆ ಎಂದರೆ 'ಜೈಲು' ಅಂತ ತಿಳಿದುಕೊಂಡು ಬಿಡುತ್ತಾರೆ ಅದಕ್ಕೆ.

**ಮಹಾದೇವ:** ಹೆಂಡತಿ ಜೊತೆ ವಾದ ಮಾಡ್ಬಾರ್ದು ಅಂತ ಯಾಕೆ ಹೇಳುತ್ತಾರೆ?
**ನಾಗಣ್ಣ:** ವಾದ ಮಾಡಿದರೆ ತಪ್ಪಿಲ್ಲ. ಆ ವಾದದಲ್ಲಿ ನಾವು ಗೆಲ್ಲಬಾರದು ಅಷ್ಟೇ.

**ಕುಮಾರ:** ಸರ್, ನಿಮ್ಮನ್ನು ಎಲ್ಲಿಯೋ ನೋಡಿದ ನೆನಪು.
**ಆತ:** ಹೌದಾ, ನಾನೊಬ್ಬ ಡಾಕ್ಟರ್.
**ಕುಮಾರ:** ಈಗ ಗೊತ್ತಾಯ್ತು ಬಿಡಿ ಸರ್, ನೀವು, ನನಗೆ ಹುಷಾರಿಲ್ಲದ ವೇಳೆಯಲ್ಲಿ ಇಂಜೆಕ್ಷನ್ ಕೊಟ್ಟು ಹುಷಾರು ಮಾಡಿದ್ದೀರಿ.
**ಆತ:** ರೀ ಮಿಸ್ಟರ್, ನಾನು ಪಶು ವೈದ್ಯ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ